# 19. ನಮ್ಮೂರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ




**ಶಾಲಾ ಧ್ಯೇಯ ವಾಕ್ಯ :- " ಪರಿಸರದೊಂದಿಗೆ ಮಗುವಿನ ಕಲಿಕೆಗೆ ಪ್ರೋತ್ಸಾಹ "**

**1 ಶಾಲೆ & ಊರಿನ ಇತಿಹಾಸ :-** ಶಿಕಾರಿಪುರ ತಾಲ್ಲೂಕ್ ಶಿವಮೊಗ್ಗ ಜಿಲ್ಲೆಯ ಐತಿಹಾಸಿಕ ಹಿನ್ನೆಲೆ ಹೊಂದಿರುವ ಬಂದಲೀಕೆಯ ಶ್ರೀ ಬನಶಂಕರೀ ದೇವಿಯ ನಾಮವನ್ನೇ ಹೊಂದಿರುವ ಗ್ರಾಮವೇ ಶಂಕರಿಕೊಪ್ಪ ಎಂದಾಗಿದೆ. ಈ ಗ್ರಾಮವು ಪುರಾತನ ಕಾಲದಿಂದ ಇದೆ ಎಂಬ ಬಗ್ಗೆ ಐತಿಹಾಸಿಕ ಪುರಾವೆಗಳಿವೆ. ಈ ಶಾಲೆಯು ಮೊದಲು 1995–96 ನೇ ಸಾಲಿನಲ್ಲಿ 01 ನೇ ತರಗತಿಯಿಂದ 04 ತರಗತಿಯವರೆಗೆ ಒಂದೇ ಕೊಠಡಿಯಲ್ಲಿ ಪ್ರಾರಂಭವಾಯಿತು. ನಾಲ್ಕೂ ತರಗತಿಗಳು ಒಂದೇ ಕೊಠಡಿಯಲ್ಲಿ ನಡೆಯುತ್ತಿದ್ದವು. ತದನಂತರ ಮತ್ತೊಂದು ಕೊಠಡಿ ನಿರ್ಮಾಣವಾಯಿತು. ಈಗ 02 ಕೊಠಡಿಗಳು 02 ಜನ ಶಿಕ್ಷಕರು ಇದ್ದಾರೆ.

ಶಿಕ್ಷಕರ ವಿವರ :- ನಮ್ಮ ಶಾಲೆಯಲ್ಲಿ ಅನುಭವಿ ಮತ್ತು ಕ್ರಿಯಾಶೀಲ ಶಿಕ್ಷಕರಿದ್ದು ಹಾಗೂ ಉತ್ತೇಜಿಸುವ & ಸಹಕಾರ ನೀಡುವ ಎಸ್ ಡಿ ಎಮ್ ಸಿ ಯವರು ಭಾಗಿಗಳಾಗಿದ್ದಾರೆ.

**2 ನಮ್ಮ ಶಾಲೆಯ ವಿಶೇಷತೆಗಳು :-**



ನಮ್ಮ ಶಾಲೆಯಲ್ಲಿ ಪಠ್ಯ ಪುಸ್ತಕದೊಂದಿಗೆ ಪಠ್ಯೇತರ ಚಟುವಟಿಕೆಗಳಿಗೆ ಆದ್ಯತೆ ನೀಡಲಾಗುತ್ತದೆ, ಮಕ್ಕಳಿಗೆ ಕಲಿಕೆಯೊಂದಿಗೆ ಪರಿಸರ ಪ್ರಜ್ಞೆ ಬೆಳೆಸಲಾಗುತ್ತದೆ. ನಮ್ಮ ಶಾಲಾ ಸುತ್ತಲಿನ ಪರಿಸರದ ಸೌಂದರ್ಯವನ್ನು ಎತ್ತರ ಪ್ರದೇಶದಿಂದ ನೋಡಿದರೆ ಧರೆಗೆ ಸ್ವರ್ಗ ಇಳಿದಂತೆ ಭಾಸವಾಗುತ್ತದೆ.

## 3 ಇಲಾಖಾ ಯೋಜನೆಗಳ ಸಮಗ್ರ ಅನುಷ್ಠಾನ:–

ಶಾಲಾ ಮಕ್ಕಳಿಗೆ ನೀಡುವ ಇಲಾಖೆಯ ಪ್ರೋತ್ಸಾಹದಾಯಕ ಯೋಜನೆಗಳಾದ ಉಚಿತ ಪಠ್ಯಪುಸ್ತಕ, ಉಚಿತ ಸಮವಸ್ತ್ರ, ಮಧ್ಯಾಹ್ನ ಬಿಸಿಯೂಟ, ಕ್ಷೀರ ಭಾಗ್ಯ, ಶೂ ಮತ್ತು ಸಾಕ್ಸ ಭಾಗ್ಯ, ವಿದ್ಯಾರ್ಥಿವೇತನ, ಮುಂತಾದವುಗಳನ್ನು ಎಲ್ಲಾ ಮಕ್ಕಳಿಗೂ ತಲುಪಿಸುವಲ್ಲಿ ಯಶಸ್ವಿಯಾಗಿದ್ದೇವೆ.





## 4 ನಲಿಕಲಿ ತರಗತಿಯ ನಿರ್ವಹಣೆ :–

01 ರಿಂದ 03 ನೇ ತರಗತಿಯ ಮಕ್ಕಳನ್ನು ಒಳಗೊಂಡ ಬಹುವರ್ಗ ಭೋಧನೆ ಮಗುವಿನ ಸ್ವ ಕಲಿಕೆ, ಸ್ವ ವೇಗದ ಕಲಿಕೆ, ಚಟುವಟಿಕೆ ಆಧಾರಿತ ಕಲಿಕೆ, ಗುಂಪು ತಟ್ಟೆಗಳಲ್ಲಿ ನಡೆಯುವ ಕಲಿಕೆಯೇ ನಲಿ ಕಲಿ ತರಗತಿ. ನಮ್ಮ ಶಾಲೆಯಲ್ಲಿ  ಈ ವಿಧಾನದಲ್ಲಿಯೇ ಮಕ್ಕಳಿಗೆ ಭೋಧನೆ ಮಾಡಲಾಗುತ್ತದೆ. ಮಕ್ಕಳು ಸಂಪೂರ್ಣ ಕಲಿತ ನಂತರ ತಮ್ಮ ಕಲಿಕಾ ಸಾಧನೆಯನ್ನು ಪ್ರಗತಿ ನೋಟದಲ್ಲಿ ಗುರುತಿಸುವ ಮೂಲಕ ಕಲಿಕಾ ಸಾಧನೆ ಮಾಡಿರುತ್ತಾರೆ.









## 5 ಕಲಿಕೋಪಕರಣಗಳೊಂದಿಗೆ ಕಲಿಕೆ :–

ಮಕ್ಕಳ ಕಲಿಕೆಗೆ ಸಹಾಯಕವಾಗುವಂತೆ ಮಿಂಚು ಪಟ್ಟಿಗಳು, ಪೊಪೆಟ್‌ಗಳು, ಚಾರ್ಟಗಳು, ರೇಡಿಯೋ ಮೋಬೈಲ್‌ಗಳಲ್ಲಿ ಕಲಿಕಾ ಆಪ್ ಬಳಕೆ ಮಾಡುವುದರೊಂದಿಗೆ ಮಕ್ಕಳ ಕಲಿಕಾ ಸಾಮರ್ಥ್ಯ ಬೆಳವಣಿಗೆ ಮಾಡಲು ಕಲಿಕೋಪಕರಣಗಳನ್ನು ಬಳಸುತ್ತಿದ್ದೇವೆ.






## 6 ಮೂಲಭೂತ ಸೌಕರ್ಯಗಳ ಅಭಿವೃದ್ಧಿ :–

ಶಾಲಾ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಪ್ರತಿ ವರ್ಷವು ಮೂಲ ಭೂತ ಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡಲಾಗಿದ್ದು ಊರಿನ ಜನರು, ಗ್ರಾ ಪಂ ಸದಸ್ಯರು, ಎಸ್ ಡಿ ಎಮ್ ಸಿ ಯವರ ಸಹಕಾರ ದಿಂದ 4&5 ನೇ ತರಗತಿಗೆ ಡೆಸ್ಕ, ದ್ವಜ ಸ್ಥಂಭ, ನೀರಿನ ಫಿಲ್ಟರ್, ನಾಯಕರ ಫೋಟೊಗಳನ್ನು ದಾನವಾಗಿ ನೀಡಿ ಮಕ್ಕಳ ಕಲಿಕೆಗೆ ಅನೌಪಚರಿಕವಾಗಿ ಶ್ರಮಿಸಿದ್ದಾರೆ.

## 7 ಕನ್ನಡ ಸಿರಿ ಪರೀಕ್ಷೆ :–



*ಇಲ್ಲಿನ ಶಿಕ್ಷಕರು ಕೀರ್ತಿ ಪ್ರಕಾಶನ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಪ್ರಚಾರ ಸಮಿತಿಯಿಂದ ನಡೆದ ಕನ್ನಡ ಸಿರಿ 'ವಿವಿಧ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಸಂಘಟಿಸಿ ವಿದ್ಯಾರ್ಥಿಗಳ ಕಲಿಕಾ ಸಾಧನೆಗಾಗಿ ಅಭಿನಂದನಾ ಪತ್ರದೊಂದಿಗೆ ಸನ್ಮಾನಕ್ಕೆ ಪಾತ್ರರಾಗಿರುತ್ತಾರೆ.*

ಸಿರಿ ಗನ್ನಡಂ ಗೆಲ್ಗೆ ಸಿರಿ ಗನ್ನಡಂ ಬಾಳ್ಗೆ

## 8 ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಿಗೆ ಪ್ರೊತ್ಸಾಹ :-

ಮಕ್ಕಳಿಗೆ ಪಠ್ಯದ ಜೊತೆಗೆ ಆಟ , ಪ್ರತಿಭಾ ಕಾರಂಜಿ, ರಾಷ್ಟ್ರೀಯ ಹಬ್ಬಗಳ ಆಚರಣೆ ,ಶೈಕ್ಷಣಿಕ ಪ್ರವಾಸ ಮುಂತಾದ ಚಟುವಟಿಕೆಗಳಿಗೆ ಆದ್ಯತೆ ನೀಡಲಾಗಿದೆ.







## 9 ಪರಿಸರ ಸ್ನೇಹಿ ಶಾಲೆ :-

ಶಾಲೆಯ ಆವರಣದಲ್ಲಿ ಷೋ ಗಿಡಗಳಿವೆ ನಂತರ ಅನತಿ ದೂರದಲ್ಲಿ ಅನೇಕ ವಿಧದ 40 ರಿಂದ 50 ಗಿಡಗಳಿವೆ ಇವು ಶಾಲೆಗೆ ಮೆರಗು ನೀಡಿವೆ. ಅನೇಕ ವಿಧದ ಹೂಗಳು ಶಾಲೆಗೆ ಅಲಂಕಾರಿಕವಾಗಿವೆ. ಮಕ್ಕಳ ಮನಸೂರೆಗೊಳ್ಳುವುದರೊಂದಿಗೆ  ಕಲಿಕೆಗೆ ಸಹಾಯಕವಾಗಿದೆ.





**10 ನೋ ಬ್ಯಾಗ್ ಡೇ :–** ಪ್ರತಿ ಶನಿವಾರದಂದು ಶಾಲೆಗಳಲ್ಲಿ ಮಕ್ಕಳಿಗೆ ಮಗ್ಗಿಗಳನ್ನು ಹೇಳಿಸುವುದು, ಕ್ವಿಜ್, ಪದ್ಯ ,ಮನೋರಂಜನಾ ಯೋಗ, ಕವಾಯತು, ಮನರಂಜನ ಆಟಗಳನ್ನು ಆಡಿಸುತ್ತೇವೆ.




## 11 ಉತ್ತಮ ಕಾರ್ಯ ನಿರ್ವಹಣಾ ಮುಖ್ಯೋಪಾಧ್ಯಾಯ & ಸಿಬ್ಬಂದಿ ವರ್ಗ:–

ಮಕ್ಕಳ ಮನಸ್ಸನ್ನು ಅರಿತು ಮಕ್ಕಳಿಗೆ ಅವಕಾಶಗಳನ್ನು ಕಲ್ಪಿಸಿ ಕಲಿಕೆಗೆ ಪ್ರೋತ್ಸಾಹಿಸುವ ಯುವ ಮುಖ್ಯ ಶಿಕ್ಷಕರಾದ ಕು. ಡಾಕ್ಯಾನಾಯ್ಕ ಎಲ್ ರವರ ಕಾರ್ಯ ವೈಖರಿ, ಶಾಲಾ ಮುಂದಿನ ತೋಟಗಳಲ್ಲಿನ ಗಿಡಗಳ ಆಕಾರಗಳ ಸೃಷ್ಟಿಕರ್ತರು, ಶಾಲಾ ದಾಖಲೆಗಳ ನಿರ್ವಹಣಾಗಾರಿಕೆಯಲ್ಲಿಯೂ ಸಫಲತೆ ಹೊಂದಿದವರು ಮಾತಿಗಿಂತ ಕಾಯಕಕ್ಕೆ ಹೆಚ್ಚು ಒತ್ತು ನೀಡುವವರು ಸಹೋದ್ಯೋಗಿ ಮಿತ್ರರಾದ ಶ್ರೀ ಯೋಗೇಶಪ್ಪ ರವರು ಕೈಜೋಡಿಸಿ ನಲಿಕಲಿ ಮಕ್ಕಳ ಪ್ರಗತಿಗೆ ನಿರಂತರವಾಗಿ ಶ್ರಮಿಸುತ್ತಿರುವುದರಿಂದ ಶಾಲಾ ಪ್ರಗತಿ ಸಾಧಿಸುತ್ತಿರುವುದು ಶ್ಲಾಘನೀಯ.




**ಕೃತಜ್ಞತೆಗಳು**

*ಈ ಎಲ್ಲಾ ಯಶಸ್ಸಿಗೆ ಕಾರಣರಾದ ಎಸ್ ಡಿ ಎಮ್ ಸಿ ಯವರಿಗೆ ಪೋಷಕರಿಗೆ ,ಹಳೆಯ ವಿದ್ಯಾರ್ಥಿಗಳಿಗೆ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ತುಂಬು ಹೃದಯದ ಧನ್ಯವಾದಗಳು*